ಮಂತ್ರಿಗಳ ಆಪ್ತ ಕಾರ್ಯದರ್ಶಿ ಮಂತ್ತು ಆಪ್ತ ಸಹಾಯಕರ ನೇಮಕದ ಬಗ್ಗೆ

೧೯೬೭ ಶ್ರೀ ಬಿ. ಲಕ್ಕಪ್ಪ (ಚಿಕ್ಕನಾಯಕನಹಳ್ಳಿ)— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ?

ಅ) ಮಂತ್ರಿಗಳಿಗೆ ಆಪ್ತ ಕಾರ್ಯದರ್ಶಿಗಳಾಗಿ ಹಾಗೂ ಆಪ್ತ ಸಹಾಯಕರಾಗಿ ನೇಮಕವಾಗ ವವರು ಅವರವರ ಆಸ್ತಿ ವಿವರಗಳನ್ನು ನಿಯಮಿತವಾಗಿ ನೀಡಬೇಕೆಂಬ ನಿಯಮವನ್ನು ಸರ್ಕಾರದವರು ಎಲ್ಲಾ ಮಂತ್ರಿಗಳಿಗೂ ಕಳುಹಿಸಿದ್ದು ನಿಜವಲ್ಲವೆ?

ಆ) ಹಾಗಿದ್ದಲ್ಲಿ ಸದರಿ ನಿಯಮವನ್ನು ಚಾಚೂ ತಪ್ಪದೆ ಅನುಸರಿಸಲಾಗುತ್ತಿದೆಯೆ? ಹಾಗೂ ಸದರಿ ನೇಮಕಾತಿಗಳಾದ ನಂತರ ಪ್ರತಿ ವರ್ಷವೂ ಸದರಿ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆಯೆ ?

ಇ) ಇದೇ ನಿಯಮವನ್ನು ಶಾಸಕರು ಹಾಗೂ ಮಂತ್ರಿಗಳಿಗೂ ಅನ್ವಯಿಸಬಾರದೇಕೆ?

ಈ) ಸರ್ಕಾರದವರು ಈ ದಿಶೆಯಲ್ಲಿ ಕೂಡಲೇ ಸೂಕ್ತ ಕ್ರಮ ಕೈಗೊಳ್ಳುವರೆ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯ ಮಂತ್ರಿಯವರು): —

ಅ) ಮಂತ್ರಿಗಳಿಗೆ ಆಪ್ತ ಕಾರ್ಯದರ್ಶಿಗಳಾಗಿ ಅಥವಾ ಆಪ್ತ ಸಹಾಯಕರಾಗಿ ನೇಮಕವಾಗು ವವರು ಸಾಮಾನ್ಯವಾಗಿ ಸರ್ಕಾರಿ ನೌಕರರು, ಸಾಮಾನ್ಯವಾಗಿ ಸರ್ಕಾರಿ ನೌಕರರಿಗೆ ಅನ್ವಯಿಸುವ ನಿಯಮಗಳೇ ಮಂತ್ರಿಗಳ ಕಛೇರಿಯಲ್ಲಿ ಕೆಲಸ ಮಾಡುವ ನೌಕರರಿಗೂ ಅನ್ವಯಿಸುತ್ತದೆ. ಇಂತಹ ಆದೇಶಗಳನ್ನೂ ನಿಯಮಗಳನ್ನು ಮಂತ್ರಿಗಳಿಗೆ ಕಳುಹಿಸುವ ಅವಶ್ಯಕತೆಯಿಲ್ಲ.

ಆ ಸರ್ಕಾರಿ ನೌಕರರ ಆಸ್ತಿ ಮತ್ತು ಋಣ ಪಟ್ಟಿಗಳ ವಿಮರ್ಶೆ ಮತ್ತು ಸಂಗ್ರಹಣೆ ಪ್ರತಿ ವರ್ಷವೂ ಮಾಡಲಾಗುತ್ತಿದೆ. ಅವರುಗಳಲ್ಲಿ ಯಾರಾದರೂ ಮಂತ್ರಿಗಳಿಗೆ ಆಪ್ತ ಕಾರ್ಯದರ್ಶಿಗಳಾಗಿದ್ದಲ್ಲಿ ಅವರವರ ಆಸ್ತಿ ವಿವರಗಳನ್ನು ಪ್ರತಿ ವರ್ಷವೂ ಪಡೆದುಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುತ್ತಿದೆ.

ಇ) ಇದೇ ನಿಯಮವು ಶಾಸಕರಿಗಾಗಲೀ ಅಥವಾ ಮಂತ್ರಿಗಳಾಗಲೀ ಅನ್ವಯಿಸುವುದಿಲ್ಲ. ಆದರೆ ಲೋಕಾಯುಕ್ತ ಅಧಿನಿಯಮದ ಪ್ರಕಾರ ಶಾಸಕರೂ ಅವರ ಆಸ್ತಿ ವಿವರ ಕೊಡಬೇಕಾಗಿದೆ.

ಈ) ಮೇಲೆ ಹೇಳಿದ ಸನ್ನಿವೇಶದಲ್ಲಿ ಈ ಪ್ರಶ್ನೆಯು ಉದ್ಭವಿಸುವುದಿಲ್ಲ.

ಶ್ರೀ ಬಿ. ಲಕ್ಕಪ್ಪ — ನಾನು ಮುಖ್ಯಮಂತ್ರಿಗಳಿಂದ ಈ ರೀತಿಯ ಉತ್ತರವನ್ನು ನಿರೀಕ್ಷಿಸಿರ ಲಿಲ್ಲ. ಕಾರಣ ಏನೆಂದು ಹೇಳಿದರೆ ನಾನು ಕೇಳಿತಕ್ಕಂಥದ್ದು ೧೯೬೪ರಲ್ಲಿ ಅವರು ಮುಖ್ಯಮಂತ್ರಿಗಳ ಸ್ಥಾನಕ್ಕೆ ಬಂದ ಹೊಸವರ್ಷದಲ್ಲಿ ಒಂದು ಗೈಡ್‌ಲೈನ್ಸ್ ಹೊರಡಿಸಿದ್ದಾರೆ. ಮಂತ್ರಿಗಳಿಗೆ ಆಪ್ತ ಕಾರ್ಯ ದರ್ಶಿ, ಆಪ್ತ ಸಹಾಯಕರುಗಳು ನೇಮಕವಾಗತಕ್ಕಂಥ ಅವರ ಆಸ್ತಿಯ ವಿವರಗಳನ್ನು ಕೊಡಬೇಕು. ಆದೂ ಕೂಡಾ ತೀರಾ ಇತ್ತೀಚಿನ ವಿವರವನ್ನು ಪಡೆಯಬೇಕು ಎಂಬುದಾಗಿ ಅವರು ಹೇಳಿದ್ದಾರೆ. ಈಗ ಅವರು ಕೇಳಿರತಕ್ಕಂಥದ್ದರಲ್ಲಿ ಸತ್ಯಾಂಶ ಇದೆ. ಏಕೆಂದರೆ ಸರ್ಕಾರದಿಂದ ಬರತಕ್ಕಂಥ, ಪಡೆಯತಕ್ಕಂಥ ಸಂಭಾವನೆಗೆ ಮಿಗಿಲಾಗಿ ಅವರು ಅಕ್ರಮ ಸಂಭಾವನೆಯನ್ನು ಪಡೆದು, ಅವರ ಆಸ್ತಿಗಳನ್ನು ಹೆಚ್ಚು ಮಾಡತಕ್ಕಂಥ ಅವಕಾಶ ಇದೆ. ಇದನ್ನೂ ತಡೆಯಬಹುದು ಮತ್ತು ಅವರ ಮೇಲೆ ಕ್ರಮ ತೆಗೆದು ಕೊಳ್ಳಬಹುದೂಎಂಬ ದೃಷ್ಟಿಯಿಂದ ಅವರು ಕೇಳಿರುವುದು ಸರಿ ಇದೆ.

ಅಧಿಕಾರಿಗಳು ಬಡವರಾಗಿ ಅಧಿಕಾರಕ್ಕೆ ಬಂದಮೇಲೆ ಅವರಿಗೆ ಎಷ್ಟು ಸಂಬಳ ಬರುತ್ತದೆ, ಎಷ್ಟು ಖರ್ಚಾಗುತ್ತದೆ ಎಂಬ ವಿವರ ಕೊಟ್ಟರೆ ಅನಧಿಕೃತ ರೀತಿಯಲ್ಲಿ, ಅಕ್ರಮ ಸಂಭಾವನೆ ಪಡೆದು ಎಷ್ಟು ಹೆಚ್ಚಿನ ಆಸ್ತಿಪಾಸ್ತಿ ಮಾಡಿಕೊಂಡಿದ್ದಾರೆ ಎಂಬುದು ಗೊತ್ತಾಗುತ್ತದೆ. ಎಷ್ಟೋ ಅಧಿಕಾರಿಗಳು ಸರಿಯಾಗಿ ಆಸ್ತಿ ವಿವರಗಳನ್ನು ಕೊಡುವುದಿಲ್ಲ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಪ್ರಾಮಾಣಿಕ ಪ್ರಯತ್ನ ಏನು ಮಾಡಿದ್ದೀರಿ ? ವಿಜಿಲೆನ್ಸ್‌ನವರು ಹಿಡಿದಿರುವವರ ಮೇಲೆ ಯಾವ ಕ್ರಮ ತೆಗೆದು ಕೊಂಡಿದ್ದೀರಿ ?

ಅಧ್ಯಕ್ಷರು.—ಭಾಷಣ ಮಾಡುತ್ತೀರೋ ಅಥವಾ ಸಪ್ಲಿಮೆಂಟರಿ ಕೇಳುತ್ತೀರೋ ಮುಖ್ಯಮಂತ್ರಿ ಗಳು ಕ್ಲಿಯರ್‌ಆಗಿ ಉತ್ತರ ಕೊಟ್ಟಿದ್ದಾರೆ. ಸುಮ್ಮನೆ ಏನೋ ಹೇಳುತ್ತೀರಲ್ಲ.

ಶ್ರೀ ಬಿ. ಲಕ್ಕಪ್ಪ.—ಸಮಾಜದ ಮುತ್ತು ಜನರ ಕಣ್ಣು ತಪ್ಪಿಸಿ ಶಾಸಕರು ಮತ್ತು ಮಂತ್ರಿಗಳಾದ ಮೇಲೆ ಕೋಟಿಗಟ್ಟಲೆ ಹಣ ಮಾಡುತ್ತಿದ್ದಾರೆ. ಈ ಬಗ್ಗೆ ತಡೆಹಿಡಿಯುವುದಕ್ಕೆ ಏನು ಕ್ರಮ ಕೈಗೊಂಡಿದ್ದಾರೆ ?

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ತರಹದ ಉತ್ತರವನ್ನು ಮುಖ್ಯಮಂತ್ರಿಗಳು ಕೊಡುತ್ತಾರೆಂದು ನಿರೀಕ್ಷೆ ಮಾಡಿರಲಿಲ್ಲ ಎಂದು ಹೇಳಿದರು. ಯಾವರೀತಿ ಪ್ರಶ್ನೆ ಕೇಳುತ್ತಾರೋ ಆ ರೀತಿಯ ಉತ್ತರ ಸಿಗುತ್ತದೆ. ಅವರ ಮನಸ್ಸಿನಲ್ಲಿರುವಂಥ ಉತ್ತರವನ್ನು ಕೊಡುವುದಕ್ಕಾಗುವುದಿಲ್ಲ. ಪ್ರಶ್ನೆ ಏನು ಕೇಳಿದ್ದಾರೆ ಎಂಬುದನ್ನು ನಾನು ಮೊದಲು ಓದುತ್ತೇನೆ. ಮಂತ್ರಿಗಳಿಗೆ ಆಪ್ತ ಕಾರ್ಯದರ್ಶಿಯಾಗಿ, ಆಪ್ತ ಸಹಾಯಕರಾಗಿ ನೇಮಕವಾಗುವವರು ಅವರವರ ಆಸ್ತಿ ವಿವರವನ್ನು ನಿಯಮಿತವಾಗಿ ನೀಡಬೇಕೆಂಬ ನಿಯಮವನ್ನು ಸರ್ಕಾರದವರು ಎಲ್ಲಾ ಮಂತ್ರಿಗಳಿಗೂ ಕಳುಹಿಸಿದ್ದು ನಿಜವಲ್ಲವೇ ಎಂದು ಕೇಳಿದ್ದಾರೆ. ಎಲ್ಲ ಮಂತ್ರಿಗಳಿಗೂ ಪ್ರತ್ಯೇಕವಾಗಿ ಕಳುಹಿಸುವ ಅಗತ್ಯ ಇಲ್ಲ. ಸರ್ಕಾರಿ ನೌಕರರ ಸೇವಾ ನಿಯಮಾವಳಿಯಲ್ಲಿ ಇದು ಸ್ಪಷ್ಟವಾಗಿದೆ. ನಿಯಮಾವಳಿ ಏನಿದೆ ಎಂಬುದನ್ನು ಮಾನ್ಯ ಸದಸ್ಯರ ತಿಳಿವಳಿಕೆಗಾಗಿ ಓದುತ್ತೇನೆ,

ಕರ್ನಾಟಕ ನಾಗರೀಕ ಸೇವಾ ವರ್ತನೆ ನಿಯಮಗಳು ;—

" ಈ ಕೆಳಗೆ ನಮೂದಿಸಿರುವ ನೌಕರರನ್ನು ಹೊರತುಪಡಿಸಿ ಉಳಿದ ಎಲ್ಲ ನೌಕರರಿಗೂ ಅನ್ವಯಿಸುತ್ತದೆ.

೧. ಕೈಗಾರಿಕೋದ್ಯಮದಲ್ಲಿ ನೇಮಕವಾಗಿರುವವರು.

೨. ಸರ್ಕಾರಿ ಸೇವೆಯಲ್ಲಿ ಪೂರ್ಣಾವಧಿ ಸೇವೆಯಲ್ಲಿ ಇಲ್ಲದ ನೌಕರರು.

೩. ಗ್ರೂಪ್ ಡಿ ನೌಕರರಂ.

೨೩ನೇ ನಿಯಮದ ಪ್ರಕಾರ ಪ್ರತಿಯೊಬ್ಬ ಸರ್ಕಾರಿ ನೌಕರನೂ ಸರ್ಕಾರಿ ಸೇವೆಗೆ ಸೇರಿದ ಕೂಡಲೇ ಮತ್ತು ನಂತರ ೧೨ ತಿಂಗಳಿಗೊಮ್ಮೆ ತಾನು ಮತ್ತು ತನ್ನ ಕುಟುಂಬದ ಇನ್ನಿತರ ಸದಸ್ಯರು ಹೊಂದಿರುವ ಆಸ್ತಿ ಮತ್ತು ಹಣವನ್ನು ನಿಗದಿಪಡಿಸಿರುವ ನಮೂನೆಯಲ್ಲಿ ಸಲ್ಲಸಬೇಕಾಗುತ್ತದೆ. "

ಇದು ನಿಯಮಾವಳಿಯಲ್ಲಿದೆ. ಆದ್ದರಿಂದ ಪ್ರತ್ಯೇಕವಾಗಿ ತಿಳಿಸಬೇಕಾಗಿಲ್ಲ. ಮತ್ತು ಆ ಪ್ರಕಾರ ಯಾರು ನಡೆದುಕೊಳ್ಳುವುದಿಲ್ಲವೋ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ.

ಮಾರ್ಕಂಡೇಯ ಕೆರೆಯ ರೀತಿಯಲ್ಲಿ ಏತ ನೀರಾವರಿ ಯೋಜನೆ.

೧೭೨೯. ಶ್ರೀ ಹೆಚ್. ಬಿ. ದ್ಯಾವರಪ್ಪ.—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರವು ಮಾರ್ಕಂಡೇಯ ಕೆರೆಯ ಪೆಮ್ಮದೊಡ್ಡಿ ಮತ್ತು ತೊರಲಕ್ಕಿ ಏತ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಲು ಉದ್ದೇಶಿಸಿದೆಯೇ ?

ಆ) ಹಿಂದಿನ ಸರ್ಕಾರ ಮತ್ತು ಈಗಿನ ಸರ್ಕಾರ ಇದರ ಬಗ್ಗೆ ಮಾಡಿದ ಖರ್ಚೆಷ್ಟು ?

ಇ) ಮೊದಲೇ ಆಳವಡಿಸಿದ ಪಂಪುಸೆಟ್ಟುಗಳಿಗೆ ನೀರು ಪೂರೈಸಲು ಕೊಳವೆ ಬಾವಿಗಳನ್ನು ತೋಡಲು ಸರ್ಕಾರವು ನಿಶ್ಚಯಿಸಿದೆಯೇ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).—

ಅ) ಈ ಎರಡು ಏತ ನೀರಾವರಿ ಯೋಜನೆಗಳು ಈಗಾಗಲೇ ಪೂರ್ಣಗೊಂಡಿವೆ.